ಮಲಗಿದ್ದಾಗ ದಿನಾಂಕ ೨೩/೨೪-೧-೮೬ರ ರಾತ್ರಿ ಸುಮಾರು ೩-೪೫ ಗಂಟೆ ಸಮಯದಲ್ಲಿ ಉಮೇಶ್ ಶೆಣೈ ಮತ್ತು ಇತರ ೬೦ ಮಂದಿ ಜನರು ಅವರ ಮನೆಗೆ ಹೋಗಿ ಅವರನ್ನು ಬಲವಂತದಿಂದ ಎತ್ತಿಕೊಂಡು, ಕೈಗಳನ್ನು ಕಟ್ಟಿ ತೀರ್ಥಹಳ್ಳಿ ಹತ್ತಿರವಿರುವ ತುಂಗ ನದಿಯಲ್ಲಿ ಹಾಕಿದರು. ಇವರ ಬಾಯಿ ಮಾತಿನ ದೂರನ್ನು ಬರಹಕ್ಕೆ ಇಳಿಸಿ ಅಪರಾಧ ಸಂಖ್ಯೆ ೧೮/೮೬ ಕಲಂ ೩೪೧, ೩೪೩, ೩೦೭ ಓದಲಾಗಿ ೧೪೯ ಭಾ. ದಂ. ಸಂ.ಯ ಪ್ರಕಾರ ಗಂನ್ನೆಯೊಂದನ್ನು ನೋಂದಾಯಿಸಲಾಯಿತು. ಫಿರ್ಯಾದುದಾರರಾದ ಕೆ. ಎನ್. ಕೃಷ್ಣರವರನ್ನು ಎಸ್. ಜೆ. ಸಿ. ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕಳುಹಿಸಲಾಯಿತು.

ದಿನಾಂಕ ೨೪-೧-೮೬ ರಂದು ೧೦ ಗಂಟೆಯಲ್ಲಿ ಉಮೇಶ್ ಶೆಣೈ ಮತ್ತು ಸೀನಾ ಮೇಸ್ತ್ರಿ ಇವರುಗಳನ್ನು ತೀರ್ಥಹಳ್ಳಿ ಪೋಲೀಸ್ ಠಾಣೆಗೆ ಕರೆಯಿಸಲಾಯಿತು. ಅವರನ್ನು ಸುಮಾರು ೨ ಗಂಟೆ ಸಮಯದಲ್ಲಿ ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಕಳುಹಿಸಲಾಯಿತು. ನ್ಯಾಯಾಧೀಶರು ಅವರನ್ನು ೧೫ ದಿವಸಗಳವರೆಗೆ ನ್ಯಾಯಾಂಗದ ಅಭಿರಕ್ಷೆಗೆ ಒಳಪಡಿಸಿದರು. ಉಮೇಶ್ ಶೆಣೈ ಮತ್ತು ಸೀನಾ ಮೇಸ್ತ್ರಿ ಇವರುಗಳನ್ನು ದಿನಾಂಕ ೨೫-೧-೮೬ ರಂದು ಬಿಡುಗಡೆ ಮಾಡಲಾಯಿತು. ದಿನಾಂಕ ೨೫-೧-೮೬ ರಂದು ಶಿವಮೊಗ್ಗ ಜಿಲ್ಲಾ ಆರಕ್ಷಕ ಅಧೀಕ್ಷಕರು ತೀರ್ಥಹಳ್ಳಿಗೆ ಭೇಟಿ ನೀಡಿ ಮೇಲ್ಕಂಡ ಅಪರಾಧಕ್ಕೆ ಸಂಬಂಧಿಸಿದಂತೆ ಕಡತವನ್ನು ಸಮೀಕ್ಷಿಸಿ ಪೃತ್ತ ಆರಕ್ಷಕ ನಿರೀಕ್ಷಕರು ಮತ್ತು ಆರಕ್ಷಕ ಉಪ ನಿರೀಕ್ಷಕರೊಡನೆ ಚರ್ಚಿಸಿದರು. ಅನಂತರ ಎಲ್ಲಾ ಪಕ್ಷದ ಮುಖಂಡರುಗಳು ಅವರನ್ನು ಭೇಟಿ ಮಾಡಿ ಉಮೇಶ್ ಶೆಣೈ ಮತ್ತು ಸೀನಾ ಮೇಸ್ತ್ರಿರವರ ದಸ್ತಗಿರಿಯಿಂದ ಉಂಟಾದ ಪರಿಸ್ಥಿತಿ ಬಗ್ಗೆ ವಿವರಿಸಿದರು. ಇದಕ್ಕೆ ಹಿನ್ನೆಲೆ ಕೆ.ಎನ್. ಕೃಷ್ಣ ಮಂತ್ತು ಉಮೇಶ್ ಶೆಣೈ ಇವರಿಬ್ಬರು ಒಂದು ಜಮೀನಿನ ವಿವಾದದಲ್ಲಿ ತೊಡಗಿದ್ದಾರೆ. ಕೆ. ಎನ್. ಕೃಷ್ಣರವರು ಈ ಮೊದಲು ಸೀನಾ ಮೇಸ್ತ್ರಿಯವರ ಮೇಲೆ ದಿನಾಂಕ ೨೨-೧-೮೬ ರಂದು ಒಂದು ದೂರು ಇತ್ತಿದ್ದರು. ಆ ದೂರಿನ ಮೇಲೆ ಅಪರಾಧ ಸಂಖ್ಯೆ ೧೬/೮೬ ಕಲಂ ೩೪೧, ೩೨೧ ಭಾ.ದಂ.ಸಂ.ಯ ಪ್ರಕಾರ ಸೀನಾ ಮೇಸ್ತ್ರಿಯವರ ವಿರುದ್ಧ ಗಂನ್ನೆಯೊಂದನ್ನು ನೋಂದಾಯಿಸಲಾಯಿತು.

ಈ ಮೊಕದ್ದಮೆಯಂ ಸರಿಯಾದ ರೀತಿಯಲ್ಲಿ ಮಾಡಿದ್ದಾರೋ ಇಲ್ಲೋ ಎಂಬುದರ ಬಗ್ಗೆ ಶಿವಮೊಗ್ಗ ಜಿಲ್ಲೆಯ ಆರಕ್ಷಕ ಅಧೀಕ್ಷಕರು ತನಿಖೆ ಕೈಗೊಂಡಿದ್ದಾರೆ. ವೈಯಕ್ತಿಕ ದ್ವೇಷದಿಂದ ಈ ಮೊಕದ್ದಮೆ ನೊಂದಾಯಿಸಿರಬಹುದು ಎಂದು ಸಂಶಯಂ ಆರಕ್ಷಕರು ಅಧೀಕ್ಷಕರು ವ್ಯಕ್ತಪಡಿಸಿದ್ದಾರೆ. ಏನಾದರೂ ಆಗಲಿ ಅವರು ಎರಡು ಪಕ್ಷದವರಿಗೆ ಸೂಕ್ತ ಹಾಗೂ ನಾಯ್ಯವಾದ ತನಿಖೆ ಈ ಮೊಕದ್ದಮೆಯಲ್ಲಿ ನಡೆಸುತ್ತಾರೆ ಎಂದು ಭರವಸೆಯನ್ನು ಕೊಟ್ಟಿದ್ದಾರೆ.

ದಿನಾಂಕ ೨೫-೧-೮೬ ದಿವಸದಲ್ಲಿ ತೀರ್ಥಹಳ್ಳಿ ಊರಿನಲ್ಲಿ ಯಾವುದೂ ಬಂದ್ ಆಗಲಿಲ್ಲ, ಸಾರ್ವಜನಿಕ ಜೀವನ ಸಾಧಾರಣವಾಗಿ ಇತ್ತು ಎಂದು ತಿಳಿದು ಬಂದಿದೆ.

## (VII) ಬೆಂಗಳೂರಿನ ಕಾವಲ್ ಬೈರಸಂದ್ರದ ಶ್ರೀ ಶ್ರೀನಿವಾಸ್ ರವರನ್ನು ಮನೆ ಮಾಲೀಕ ಪಾಪಯ್ಯ ಎಂಬವರು ಥಳಿಸಿದ ಬಗ್ಗೆ.

ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀ ಪ್ರತಾಪಚಂದ್ರ ಶೆಟ್ಟಿಯವರು ನಿಯಮ ೩೩೪ರ ಪ್ರಕಾರ ಕೊಟ್ಟಿರುವ ಸೂಚನೆಗೆ ನಾನು ಈ ಹೇಳಿಕೆಯನ್ನು ಕೊಡಬಯಸುತ್ತೇನೆ.

ದಿನಾಂಕ ೩೦ನೇ ಜನವರಿ ೧೯೮೬ರಂದು ಬೆಳಿಗ್ಗೆ ೧೧ ಗಂಟೆ ಸಮಯದಲ್ಲಿ ಕಾವಲು ಬೈರಸಂದ್ರದ ನಿವಾಸಿ ಶ್ರೀನಿವಾಸ್ ಎಂಬುವನು ದೇವರ ಜೀವನಹಳ್ಳಿ ಆರಕ್ಷಕ ಠಾಣೆಗೆ ಹೋಗಿ ಒಂದು ದೂರನ್ನು ಇತ್ತು ಆ ದೂರಿನಲ್ಲಿ ಆ ದಿನ ಬೆಳಿಗ್ಗೆ ೯ ಗಂಟೆ ಸಮಯದಲ್ಲಿ ಮನೆಯ ಮಾಲೀಕರಾದ ಬಿ. ಪಾಪಯ್ಯ ಮತ್ತು ಅವರ ಮಕ್ಕಳಾದ ಡಿ. ಸಿ. ಮಂಜುನಾಥ, ಯಶವಂತ ಈ ಮೂರು ಜನರು ಆತನ ಮನೆಗೆ ಅತಿ ಕ್ರಮ ಪ್ರವೇಶ ಮಾಡಿ ಆತನನ್ನು ಹೊಡೆದು, ಎಳೆದು ಪ್ರಾಣಭಯ ತೋರಿಸಿದರು. ಮನೆಯ ಬಾಡಿಗೆ ಬಾಬ್ತು ರಸೀತಿ ಕೇಳಿದ್ದೆ ಈ ಘಟನೆಗೆ ಕಾರಣವಾಯಿತೆಂದು ಹೇಳಿರುತ್ತಾರೆ. ಇದರ ಬಗ್ಗೆ ದೇವರ ಜೀವನಹಳ್ಳಿಯ ಆರಕ್ಷಕ ಠಾಣೆಯಲ್ಲಿ ಸಂಖ್ಯೆ ೪/೮೬ ಕಲಂ ೪೪೮, ೫೦೬ ಮತ್ತು ೩೪ ಭಾ.ದಂ.ಸಂ.ಯ ಪ್ರಕಾರ ಮೊಕದ್ದಮೆಯನ್ನು ನೋಂದಾಯಿಸಿಕೊಳ್ಳಲಾಯಿತು. ಅನಂತರ ಮೇಲ್ಕಂಡ ಅಪರಾಧ ಗಳನ್ನು ದಸ್ತಗಿರಿ ಮಾಡಿ ಅಂತಿಮ ವರದಿಯನ್ನು ಮಾನ್ಸೀಫ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ದಿನಾಂಕ ೮ನೇ ಜನವರಿ ೧೯೮೬ರಂದು ಸಲ್ಲಿಸಲಾಯಿತು, ಅದು ಸಿಸಿ ನಂ. ೫೨/೮೬ ಎಂದು ಆಗಿರುತ್ತದೆ.

ಪುನ: ದಿನಾಂಕ ೨೪ನೇ ಜನವರಿ ೧೯೮೬ರಂದು ಮಧ್ಯಾಹ್ನ ಫಿರ್ಯಾದಿ ಶ್ರೀನಿವಾಸರವರು ದೇವರ ಜೀವನಹಳ್ಳಿ ಪೋಲೀಸ್ ಠಾಣೆಗೆ ಹೋಗಿ ಫಿರ್ಯಾದಿಯನ್ನು ಕೊಟ್ಟು ಆದರಲ್ಲಿ ಆ ದಿನ ಬೆಳಿಗ್ಗೆ ಪಾಪಯ್ಯನ ಮಕ್ಕಳಾದ ಮಂಜುನಾಥ, ಯಶವಂತ ಮತ್ತು ಮಗಳು ಜಗದ ೩ ಜನರು ಆತನ ಮನೆಗೆ ನುಗ್ಗಿ ದೊಣ್ಣೆಯಿಂದ ಆತನ ಕೈಗೆ ಹೊಡೆದು ಕಾಲಿನಿಂದ ಒದ್ದು ಮನೆ ಬಿಟ್ಟು ಹೋಗುವಂತೆ ಹೆದರಿಸಿ ದ್ದಾರೆಂದು ಹೇಳಿರುತ್ತಾರೆ. ಇದರ ಬಗ್ಗೆ ದೇವರ ಜೀವನಹಳ್ಳಿ ಆರಕ್ಷಕ ಠಾಣೆಯಲ್ಲಿ ಅಪರಾಧ ಸಂಖ್ಯೆ. ೨೨/೮೬ ಕಲಂ ೪೪೨, ೪೨೨, ೩೨೪, ೩೨೩, ೫೦೬ ಮತ್ತು ೪೪ ಭಾ.ದಂ.ಸಂ.ಪ್ರಕಾರ ಗುನ್ನೆ ಯೊಂದನ್ನು ದಾಖಲು ಮಾಡಿಕೊಂಡು ತನಿಖೆ ಮುಂದುವರಿಯುತ್ತಿದೆ. ಈ ಮೊಕದ್ದಮೆಯು ದಾಖಲಾ ಗಿರುವುದನ್ನು ತಿಳಿದು ಅಪರಾಧಿಗಳು ನ್ಯಾಯಾಲಯಕ್ಕೆ ಹೋಗಿ ನಿರೀಕ್ಷಣಾ ಜಾಮೀನನ್ನು ಪಡೆದು ಕೊಂಡಿದ್ದಾರೆಂದು ತಿಳಿದು ಬಂದಿದೆ. ಆದರೂ ಮಂಜುನಾಥ ಮತ್ತು ಯಶವಂತ ಆ ದಿನದಿಂದ ಊರಿನಲ್ಲಿ ಇರುವುದಿಲ್ಲ. ಈ ಮೊಕದ್ದಮೆಗಳು ವರದಿಯಾದ ಮೇಲೆ ಫಿರ್ಯಾದಿಯ ಕೋರಿಕೆಯಂತೆ ಒಂದು ಪೋಲೀಸ್ ಪಾಯಿಂಟ್ ಪುಸ್ತಕವನ್ನು ಅವರ ಮನೆಯ ಹತ್ತಿರ ಇಟ್ಟು ಗಸ್ತು ಪೋಲೀಸರಿಗೆ ಆಗಿಂದಾಗ್ಗೆ ಸದರಿ ಮನೆಯ ಹತ್ತಿರ ಹೋಗಿ ವಿಚಾರ ಮಾಡುವಂತೆ ತಿಳುವಳಿಕೆ ಕೊಡಲಾಗಿದೆ. ಆದೂ ಅಲ್ಲದೆ ದಿನಾಂಕ ೨೪ನೇ ಜನವರಿ ೧೯೮೬ರಂದು ಒಬ್ಬ ಆರಕ್ಷಕ ಪೇದೆಯನ್ನು ಹಗಲು ರಾತ್ರಿ ಫಿರ್ಯಾದು ದಾರರಿಗೆ ರಕ್ಷಣೆ ಕೊಡಲು ಮತ್ತು ಮುಂದೆ ಯಾವ ವಿಧವಾದ ಅಹಿತಕರ ಘಟನೆಗಳು ನಡೆಯದಂತೆ ನೋಡಿಕೊಳ್ಳಲು ನೇಮಕ ಮಾಡಲಾಗಿದೆ. ಅಪರಾಧಿಗಳ ಮೇಲೆ ಕಲಂ ೧೦೭ ಸಿಆರ್‌ಪಿಸಿ ಪ್ರಕಾರ ಕೂಡಲೆ ಕ್ರಮ ತೆಗೆದುಕೊಳ್ಳುವಂತೆ ಸಹ ತಿಳುವಳಿಕೆ ಕೊಡಲಾಗಿದೆ.

ಉಪಾಧ್ಯಕ್ಷರು.—ಈಗ ತಿದ್ದುಪಡಿ ವಿಧೇಯಕವನ್ನು ಮಂಡಿಸುವುದು,

ಶ್ರೀ ಎಂ: ರಾಮಪ್ಪ,—ಸ್ವಾಮಿ. ನಮ್ಮ ಬಳ್ಳಾರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ಕೊಟ್ಟಿದ್ದ ನೋಟೀಸಿಗೆ ಉತ್ತರ ಬರಲಿಲ್ಲ.

ಉಪಾಧ್ಯಕ್ಷರು.—ಈಗಾಗಲೇ ೭ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ನಿಮ್ಮ ನೋಟೀಸಿಗೆ ಉತ್ತರ ಬಂದಕೂಡಲೇ ಅದಕ್ಕೂ ಉತ್ತರವನ್ನು ಕೊಡುತ್ತಾರೆ.

ಶ್ರೀ ಎಂ, ರಾಮಪ್ಪ.—ಅಲ್ಲಿ ದರೋಡೆ ಆಗಿರತಕ್ಕ ವಿಚಾರ. ಮಾನ್ಯ ಸಚಿವರು ಅವರಿಗೆ ಬಂದಂಥ ನೋಟೀಸಿಗೆ ಆಗಿಂದಾಗಲೇ ಉತ್ತರವನ್ನು ಕೊಟ್ಟಿದ್ದರೆ ಇವೊತ್ತು ಇಷ್ಟೆಲ್ಲಾ ಅವಸ್ಥೆಯೇ ಆಗುತ್ತಿರಲಿಲ್ಲ.

ಶ್ರೀ ಬಿ. ರಾಚಯ್ಯ.—ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಉದಾಸಿಯವರಂ ಕೊಟ್ಟಿರುವುದಕ್ಕೆ ಉತ್ತರ ಬಂದಿದೆ, ಇದನ್ನು ಓದಿಬಿಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ,—ಸ್ವಾಮಿ, ಯಾರು ಸದನದಲ್ಲಿ ಹಾಜರಿರುವುದಿಲ್ಲ ಅವರ ಪ್ರಶ್ನೆಗಳಿಗೆ ಉತ್ತರ ಕೊಡುತ್ತೀರಿ. ನಿಮ್ಮ ಈ ರಾಮಾಯಣ ಕೇಳಿ ಕೇಳಿ ನಮಗೆ ಬೇಸರವಾಗಿದೆ.

ಉಪಾಧ್ಯಕ್ಷರು.—ಸರ್ಕಾರದವರು ಉತ್ತರವನ್ನು ಕೊಡಲಿಲ್ಲ, ಕೊಡಲಿಲ್ಲ ಎಂದು ಗಲಾಟೆ ಮಾಡು ತ್ತೀರಿ. ಉತ್ತರವನ್ನು ಕೊಡುತ್ತೇವೆಂದು ಸರ್ಕಾರದವರು ಹೇಳಿದಾಗ ಬೇಡ ಎಂದು ಹೇಳುತ್ತೀರಿ. ಇದಕ್ಕೆ ಏನು ಮಾಡಬೇಕು ?

ಶ್ರೀ ಬಿ. ರಾಚಯ್ಯ.—ಬೇರೆ ಮಾನ್ಯ ಸದಸ್ಯರು ಕಳುಹಿಸಿರುವುದಕ್ಕೂ ಉತ್ತರ ಬಂದಕೂಡಲ್ಲೆ ಸಭೆಯು ಮುಂದಿಡುತ್ತೇನೆ. ಈಗ ಮಾನ್ಯ ಸದಸ್ಯರಾದ ಉದಾಸಿಯವರ ನೋಟೀಸಿಗೆ ಬಂದಿರತಕ್ಕ ಉತ್ತರವನ್ನು ಓದುತ್ತೇನೆ. ಅದು ಈ ರೀತಿ ಇದೆ.